ಯಾರ ಕಣ್ಣಿಗೂ ಬೀಳದಂತೆ ತನ್ನ ಪಾಡಿಗೆ ತಾನಿದ್ದರೆ ಸಾಕು ಎನ್ನುವಂತಹ ನಡೆನುಡಿ ಅವನದು. ಇಸ್ತ್ರಿ ಹಾಕುವುದಲ್ಲದೆ ಬೇರೆ ಏನೂ ಅವನಿಗೆ ಗೊತ್ತಿರಲಿಲ್ಲ.

ಅಪ್ಪಣ್ಣನಿಗೆ ಮಾಕಾಲ ಪಟ್ಟಣದಲ್ಲಿ ಸ್ವಂತದ್ದಾಗಿ ಕುಟುಂಬದ ಹಿತ್ತಲುಮನೆ ಇತ್ತು. ಬ್ರಿಟಿಷರ ಕಾಲದಿಂದಲೇ ಅವನ ಅಜ್ಜ, ಮುತ್ತಜ್ಜ ಆ ಜಾಗದಲ್ಲಿ ವಾಸವಾಗಿದ್ದರು. ಅವನ ಮುತ್ತಜ್ಜ ಬಾರಕಳಿಯ ಕುರುಂಬಿಲ ಎಂಬುವನು ಬ್ರಿಟಿಷರ ತಾಲೂಕು ಆಫೀಸಿನಲ್ಲಿ ಜವಾನನಾಗಿ ಕೆಲಸ ಮಾಡುತ್ತಿದ್ದನಂತೆ. ಬೆಳಗ್ಗೆ ಕಸಗುಡಿಸುವುದೆಲ್ಲ ಆದ ನಂತರ ತಹಶೀಲ್ದಾರರ ಕೊಠಡಿಯ ಬಾಗಿಲಿನ ಹೊರಗೆ ಸ್ಟೂಲಿನ ಮೇಲೆ ಕುಳಿತುಕೊಂಡು ತಹಶೀಲ್ದಾರರ ಆದೇಶವಾದಂತೆ ಕೈಕೆಲಸಗಳನ್ನು ಮಾಡುತ್ತಿದ್ದ. ಅವರಿಗೆ ಸೆಕೆಯಾದಾಗ ಅವರ ತಲೆ ಮೇಲೆ ಮಾಡಿನಿಂದ ನೇತಾಡಿಸಿದ್ದ ದೊಡ್ಡ ಬೀಸಣಿಗೆಗೆ ಹಗ್ಗ ಕಟ್ಟಿ ರಾಟೆಯ ಮೂಲಕ ಹಾಯಿಸಿ ತನ್ನೆದುರು ಇಳಿಬಿಟ್ಟದ್ದ ಹಗ್ಗದ ತುದಿಯನ್ನು ಮೇಲೆ ಕೆಳಗೆ ಜಗ್ಗುವ ಮೂಲಕ ಬೀಸಣಿಗೆ ಬೀಸುವಂತೆ ಮಾಡುತ್ತಾ, ಅವರ ಮೇಲೆ ಹಿತವಾದ ಗಾಳಿ ಇಳಿಯುವ ಹಾಗೆ ನೋಡಿಕೊಳ್ಳುತ್ತಿದ್ದ. ಆಗಿನ ತಹಶೀಲ್ದಾರರೇ ಈಗ ಅಪ್ಪಣ್ಣನಿದ್ದ ಜಾಗವನ್ನು ಅವನ ಮುತ್ತಜ್ಜನಿಗೆ ಮಂಜೂರು ಮಾಡಿಸಿದ್ದರೂ ಮಾಡಿಸಿರಬಹುದು. ಅಂತೂ ದಾಖಲೆ ಪ್ರಕಾರವೇ ಈ ಮನೆ ಹಿತ್ತಲು ಅವರದಾಗಿತ್ತು. ಅಲ್ಲಿದ್ದ ಒಂದು ಹಳೆಯ ಮುಳಿಹುಲ್ಲಿನ ಗುಡಿಸಲಿನಲ್ಲಿ ಈಗ ಅಪ್ಪಣ್ಣ ತನ್ನ ಹೆಂಡತಿ ಉಮಿಲು ಮತ್ತು ಆರು ತಿಂಗಳ ಮಗು ರೋಹಿತ ಇವರ ಜತೆಯಲ್ಲಿ ವಾಸಿಸುತ್ತಿದ್ದ.

ಠಾಣೆಯ ನಾಲ್ವರು ಪೊಲೀಸರ ಸಭೆಯಲ್ಲಿ ಪ್ರೊಹಿಬಿಶನ್ ಕೇಸನ್ನು ನಾಮ್‌ಕೇವಾಸ್ತೆ ಎಂಬಂತೆ ಅಪ್ಪಣ್ಣನ ಮೇಲೆಯೇ ಹಾಕಬೇಕೆಂಬ ಸಲಹೆಯೇ ಹೆಚ್ಚು ಚಿಂತನೆಗೊಳಗಾಗದೆ ಕಾರ್ಯರೂಪಕ್ಕೆ ಬಂತು. ತನ್ನ ತಳ್ಳುಗಾಡಿಯಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದುದಕ್ಕಾಗಿ ಇಸ್ತಿರಿ ಅಪ್ಪಣ್ಣನನ್ನು ಬಂಧಿಸಿ ಕೋರ್ಟಿಗೆ ಹಾಜರು ಪಡಿಸಲಾಯಿತು. ಅವನಿಗೆ ಜಾಮೀನು ಕೊಡಲು ಯಾರೂ ಬರಲಿಲ್ಲವಾದ್ದರಿಂದ ಅವನನ್ನು ಜೈಲಿನೊಳಗೆ ಕರೆದುಕೊಂಡು ಬಂದು ಅವನು ಇರಬೇಕಾದ ಜಾಗವನ್ನು ತೋರಿಸಿದರು.

ಇಸ್ತಿರಿ ಅಪ್ಪಣ್ಣನ ಮನೆಗೆ ಒಬ್ಬ ಪೊಲೀಸ್ ಕಾನ್‌ಸ್ಟೆಬಲ್ ಹೋಗಿ, ಅವನ ಹೆಂಡತಿ ಉಮಿಲುವಿಗೆ ವರದಿ ಕೊಟ್ಟ. 'ಒಂದು ಸಣ್ಣ ಕೇಸಿನ ಕಾರಣ ಅಪ್ಪಣ್ಣನನ್ನು ಅರೆಸ್ಟ್ ಮಾಡಿದ್ದೇವೆ. ಅವನ ತಪ್ಪೇನೂ ಇರಲಿಲ್ಲ. ಯಾರೋ ಅವನ ಇಸ್ತ್ರಿ ಮಂದಿರಿಯ ಅಡಿಯಲ್ಲಿ ಗಾಂಜಾ ಅಡಗಿಸಿಟ್ಟದ್ದರು. ಪೊಲೀಸರಿಂದ ತಪ್ಪಿಸಿಕೊಳ್ಳಲಿಕ್ಕೆ ಅಲ್ಲಿ ಅಡಗಿಸಿಟ್ಟಿರಬಹುದು. ಆದರೆ ಪೊಲೀಸರು ಹುಡುಕುವಾಗ ಸಿಕ್ಕಿದ್ದು ಅಪ್ಪಣ್ಣನ ಇಸ್ತ್ರಿ ಗಾಡಿಯಲ್ಲಿ, ಮಂದಿರಿಯ ಅಡಿಯಲ್ಲಿ! ನಮಗೆಲ್ಲ ಅಪ್ಪಣ್ಣ ಅಂದರೆ ಪ್ರೀತಿಯೆ ಅಲ್ಲವಾ ಅಕ್ಕ? ಆದರೆ ಅವನ ಮೇಲೆಯೇ ಕೇಸ್ ಬುಕ್ ಮಾಡಬೇಕಾಯಿತು. ನಾವೇ ಬಿಡಿಸಿ ತರುತ್ತೇವೆ. ನೀವೇನೂ ಚಿಂತೆ ಮಾಡಬೇಡಿ'ಎಂದ.

ಪೊಲೀಸರೆಲ್ಲ ಇಸ್ತಿರಿ ಅಪ್ಪಣ್ಣನ ಬಳಿಯೆ ಉಚಿತವಾಗಿ ಇಸ್ತ್ರಿ ಮಾಡಿಸಿಕೊಳ್ಳುತ್ತಿದ್ದದ್ದು ಅವಳಿಗೂ ಗೊತ್ತಿತ್ತು. ಹಾಗಾಗಿ ಅವಳಿಗೆ ಅವರ ಭಯವೇನೂ ಇರಲಿಲ್ಲ. ಸುಮ್ಮನೆ ತಲೆಯಾಡಿಸಿದಳು. ಅವಳಿಗೆ ತಮ್ಮ ನಿತ್ಯದ ಊಟಕ್ಕೇನು ಗತಿ ಎಂಬ ಯೋಚನೆ ಬಂದರೂ ಅವಳೂ ಕೂಲಿ ಕೆಲಸಕ್ಕೆ ಹೋಗುತ್ತಿದ್ದುದರಿಂದ ಹೊಟ್ಟೆಪಾಡಿನ ಚಿಂತೆ ದೊಡ್ಡದೇನೂ ಆಗಿರಲಿಲ್ಲ.

ಇಸ್ತಿರಿ ಅಪ್ಪಣ್ಣನು ಹೀಗೆ ಜೈಲು ಪಾಲಾಗಿ ಹೋದ. ಅವನಿಗೆ ಜಾಮೀನು ಕೊಡಿಸಿ ಹೊರಗೆ ಕಳುಹಿಸುವ ಉತ್ಸಾಹ ಪೊಲೀಸರಿಗೂ ಇರಲಿಲ್ಲ. ಆಮೇಲೆ ಅವನ ಕೇಸ್ ಹಿಯರಿಂಗಿಗೆ ಬಂದಾಗ ನ್ಯಾಯಾಧೀಶರು ಕೇಳಿದ ಪ್ರಶ್ನೆಗೆ ಅಪ್ಪಣ್ಣ, 'ನಾನಲ್ಲ', 'ನನಗೇನೂ ಗೊತ್ತಿಲ್ಲ' ಎಂದು ಹೇಳಿದ. ಅವನು ಅಂತಹ ಕೆಲಸ ಮಾಡಲಿಕ್ಕಿಲ್ಲ ಎಂದು ಯಾರಿಗಾದರೂ ಅನಿಸುವಂತೆ ಅಪ್ಪಣ್ಣನ ವ್ಯಕ್ತಿತ್ವ ಇತ್ತು. ಅವನು ಹರಕೆಯ ಕುರಿಯಾಗಿ ಬಂದವನೆಂದು ನ್ಯಾಯಾಧೀಶರಿಗೂ ಅರ್ಥವಾಗಿತ್ತು.

ಆಗಲೇ ಅಪ್ಪಣ್ಣ ಜೈಲಿನಲ್ಲಿ ಇಪ್ಪತ್ತೈದು ದಿನಗಳನ್ನು ಕಳೆದಾಗಿತ್ತು. ಮತ್ತೇನು ಮಾಡುವುದು ಎಂದು ನ್ಯಾಯಾಧೀಶರು ಅವನಿಗೆ ಒಂದು ತಿಂಗಳ ಸಾದಾ ಜೈಲುವಾಸ ಶಿಕ್ಷೆಯನ್ನು ವಿಧಿಸಿ ತೀರ್ಪುಕೊಟ್ಟರು. ಅಪ್ಪಣ್ಣ ಮತ್ತೆ ಐದು ದಿನಗಳ ಜೈಲುವಾಸವನ್ನು ಪೂರೈಸಿ ಮನೆಗೆ ಹೋಗಬೇಕಿತ್ತು. ಆದರೆ ಹಾಗಾಗಲಿಲ್ಲ. ಹೆಡ್‌ಕಾನ್‌ಸ್ಟೆಬಲ್ ಕರುಣಾಕರನು